Fullerton India
Rishta Sammaan Ka

# ಒಂದು ಬಾರಿಯ ಸಾಲದ ಪುನರ್‍ರಚನೆಯ ಸ್ಕೀಮಿನ ಬಗ್ಗೆ ಹೆಚ್ಚಾಗಿ ಕೇಳಲಾಗುವ ಪ್ರಶ್ನೆಗಳು

### 1. ಆರ್‌ಬಿಐ ಒಪ್ಪಿಗೆ ಕೊಟ್ಟಿರುವ ಪುನರ್‍ರಚನೆಯ ಸ್ಕೀಮ್ ಎಂದರೇನು? ಈ ತೀರ್ಮಾನದ ನಿಯಮಗಳ ಚೌಕಟ್ಟಿನ ಉದ್ದೇಶವೇನು?

ಕೋವಿಡ್-19 ಪಿಡುಗು ಮತ್ತು ದೇಶಾದ್ಯಂತದ ಲಕ್ಷಾಂತರ ಸಾಲಗಾರರ ಮೇಲೆ ಅದರಿಂದಾದ ಆರ್ಥಿಕ ಪರಿಣಾಮಗಳ ಬೆಳಕಿನಲ್ಲಿ, ಆರ್‌ಬಿಐ ಸಂಸ್ಥೆಯು ಬ್ಯಾಂಕುಗಳು ಮತ್ತು ಇತರ ಸಾಲ ನೀಡುವ ಸಂಸ್ಥೆಗಳಿಗೆ ಪರಿಹಾರದ ನಿಯಮಗಳನ್ನು ಅನುಷ್ಠಾನಕ್ಕೆ ತರಲು ಒಂದು ಚೌಕಟ್ಟನ್ನು ಒದಗಿಸಿದೆ. ಕೋವಿಡ್-19 ಪಿಡುಗಿನಿಂದಾಗಿ ಆರ್ಥಿಕ ದುಷ್ಪರಿಣಾಮಕ್ಕೊಳಗಾದ ಸಾಲಗಾರರಿಗೆ ಪರಿಹಾರ ನೀಡುವುದು ಈ ಚೌಕಟ್ಟಿನ ಉದ್ದೇಶವಾಗಿದೆ.

ಆ ಚೌಕಟ್ಟು ಮತ್ತು ಅದರ ನಿಯಂತ್ರಕ ಮಾರ್ಗಸೂಚಕಗಳ ಆಧಾರದ ಮೇಲೆ, ಕೋವಿಡ್-19 ಪಿಡುಗಿನಿಂದ ದುಷ್ಪರಿಣಾಮಕ್ಕೊಳಗಾದ ವ್ಯಕ್ತಿಗಳು ಮತ್ತು ಎಂಟಿಟಿಗಳು ತೆಗೆದುಕೊಂಡಿರುವ ಸಾಲಗಳ ಪುನರ್‍ರಚನೆಗೆ ಫುಲ್ಲರ್‌ಟನ್ ಇಂಡಿಯ ತನ್ನ ಪಾಲಿಸಿಯನ್ನು ರಚಿಸುತ್ತಿದೆ.

### 2. ಸಾಲದ ಪುನರ್‍ರಚನೆಗೆ ಯಾರು ಅರ್ಹರು?

ಸಾಲದ ಪುನರ್‍ರಚನೆಯ ಅರ್ಹತೆಯನ್ನು ನಿರ್ಧರಿಸುವ ಮೂಲ ಮಾನದಂಡಗಳು ಇಲ್ಲಿವೆ :

1. ಮಾರ್ಚ್ 2020ರ ಪ್ರಕಾರ ಅರ್ಜಿದಾರನ ಇಎಮ್‌ಐ/ಬಡ್ಡಿ ಕಟ್ಟುವಿಕೆಯು 30 ದಿನಗಳಿಗಿಂತ ಹೆಚ್ಚು ಕಾಲ ಬಾಕಿ ಇರಬಾರದು. ಬ್ಯಾಂಕ್‌ಗಳು ಮತ್ತು ಎನ್‌ಬಿಎಫ್‌ಸಿ-ಗಳಿಂದ ತೆಗೆದುಕೊಂಡ ಸಾಲ ರೂ. 25 ಕೋಟಿಗಿಂತ ಕಡಿಮೆ ಇರುವ ಎಮ್‌ಎಸ್‌ಎಮ್‌ಇ ಸಾಲಗಾರರಿಗೆ ಈ ಅವಧಿಯು 89 ದಿನವಾಗಿರುತ್ತದೆ
2. ಅರ್ಜಿದಾರನ ಮೇಲೆ ಕೋವಿಡ್-19ರ ಕಾರಣವಾಗಿ ಆದಾಯ / ನಗದುಹಣದ ಸಂಗ್ರಹಣೆ ಇಲ್ಲವಾಗುವುದು ಅಥವಾ ಕಡಿಮೆಯಾಗುವುದರ ರೂಪದಲ್ಲಿ ಆರ್ಥಿಕವಾಗಿ ದುಷ್ಪರಿಣಾಮವಾಗಿರಬೇಕು.

ದಯವಿಟ್ಟು ಗಮನದಲ್ಲಿಟ್ಟುಕೊಳ್ಳಿರಿ :

1. ಆದಾಯದಲ್ಲಿ ಕುಸಿತ ಮತ್ತು ಅದರಿಂದ ಅರ್ಜಿದಾರನ ಮೇಲೆ ಆದ ಆರ್ಥಿಕ ಪರಿಣಾಮವನ್ನು, ಸಾಲಗಾರನು ನೀಡುವ ಮಾಹಿತಿ ಮತ್ತು ಅದನ್ನು ಬೆಂಬಲಿಸುವ ದಾಖಲೆಗಳ ಆಧಾರದ ಮೇಲೆ ಫುಲ್ಲರ್‌ಟನ್ ಇಂಡಿಯ ಪರಿಶೀಲಿಸುತ್ತದೆ
2. ಆಗ ಫುಲ್ಲರ್‌ಟನ್ ಇಂಡಿಯ ಪುನರ್‍ರಚನೆಯ ಪ್ಲ್ಯಾನಿಗೆ ಒಪ್ಪಿಗೆ ಕೊಡುವ ಮೊದಲು, ಅರ್ಜಿದಾರನೊಂದಿಗೆ ಚರ್ಚೆಗಳು ಮತ್ತು ಮೌಲ್ಯಾಂಕನದ ಆಧಾರದ ಮೇಲೆ, ಪುನರ್‍ರಚಿತ ಇಎಮ್‌ಐ/ಬಡ್ಡಿಯನ್ನು ಕಟ್ಟಲು ಆರಂಭಿಸುವ ಆತನ ಯೋಗ್ಯತೆಯನ್ನು ಮೌಲ್ಯಾಂಕನ ಮಾಡುತ್ತದೆ.
3. ಫುಲ್ಲರ್‌ಟನ್ ಇಂಡಿಯ ಅರ್ಜಿದಾರನ ಸಾಲ ವಾಪಸಾತಿಯ ಇತಿಹಾಸ ಮತ್ತು ಆರ್‌ಬಿಐ ನೀಡಿದ ಮಾರ್ಚ್-ಆಗಸ್ಟ್ 2020ರ ನಡುವಿನ ಸಾಲ ವಾಪಸಾತಿಯ ತಾತ್ಕಾಲಿಕ ತಡೆಯನ್ನು ಬಳಸಿಕೊಳ್ಳುವಾಗ ಆತ ನೀಡಿದ ಪ್ರತಿಕ್ರಿಯೆಗಳನ್ನು ಕೂಡ ಪರಿಗಣಿಸುತ್ತದೆ.

KYONKI DIL AAPKI
NAHI SUNTA,
HUM AAPKI SUNTE HAIN.
#RishtaSammaanKa

### 3. ನಾನು ಸಾಲದ ಪುನರ್ರಚನೆಯನ್ನು ಆಯ್ದುಕೊಳ್ಳಲೇಬೇಕೇ?

ನೀವು ಆದಾಯದ ಹೊಸ ಮೂಲಗಳನ್ನು ಕಂಡುಕೊಳ್ಳುವ ಮೂಲಕ ಅಥವಾ ನಿಮ್ಮ ಖರ್ಚುಗಳನ್ನು ನಿಭಾಯಿಸುವ ಮೂಲಕ, ತಿಂಗಳ ಇಎಮ್ಐ–ಗಳನ್ನು ಕಟ್ಟುವುದು ಸಾಧ್ಯವಾದರೆ, ನೀವು ಹಾಗೆಯೇ ಮಾಡಿ, ಅನಗತ್ಯವಾಗಿ ಈ ಸ್ಕೀಮನ್ನು ಆಯ್ದುಕೊಳ್ಳಬೇಡಿ ಎಂದು ಬಲವಾಗಿ ಸಲಹೆ ಮಾಡುತ್ತೇವೆ.

ಯಾಕೆಂದರೆ ಸಾಲದ ಪುನರ್ರಚನೆಯು ಈ ಕೆಳಗಿನ ಪರಿಣಾಮಗಳನ್ನು ಮಾಡುತ್ತದೆ:

1. ಸಾಲದ ಪುನರ್ರಚನೆಗೆ ಹೆಚ್ಚುವರಿ ಫೀಸನ್ನು ವಿಧಿಸಬಹುದು, ಅದರಿಂದ ನಿಮ್ಮ ಖರ್ಚು ಹೆಚ್ಚುತ್ತದೆ.
2. ನೀವು ಕಟ್ಟುವ ಒಟ್ಟು ಬಡ್ಡಿ ಹೆಚ್ಚುತ್ತದೆ, ಅದರಿಂದ ನಿಮ್ಮ ಸಾಲ ಹೆಚ್ಚು ದುಬಾರಿಯಾಗುತ್ತದೆ.

### 4. ಸಾಲದ ಪುನರ್ರಚನೆಯಿಂದ ನನ್ನ ಸಾಲದ ಮೇಲೆ ಯಾವ ರೀತಿಯ ಪರಿಣಾಮವಾಗುತ್ತದೆ?

ನಿಮ್ಮ ಸಾಲದ ಪುನರ್ರಚನೆಯ ಕೋರಿಕೆಯು ಸ್ವೀಕೃತವಾದರೆ, ಈ ಕೆಳಗಿನ ಕೆಲವು ಪರಿಣಾಮಗಳಾಗಬಹುದು:

a. ನಿಮ್ಮ ತಿಂಗಳ ಇಎಮ್ಐ ಮೊತ್ತ ಕಡಿಮೆಯಾಗಬಹುದು, ಅದರಿಂದ ಪ್ರತಿ ತಿಂಗಳ ಸಾಲ ವಾಪಸಾತಿಯು ಕಡಿಮೆಯಾಗುತ್ತದೆ
b. ನಿಮ್ಮ ಒಟ್ಟು ಅವಧಿಯು ಹೆಚ್ಚುತ್ತದೆ, ಆ ಅವಧಿಯಲ್ಲಿ ನಿಮ್ಮ ಉಳಿದ ಸಾಲವನ್ನು ನೀವು ಹಿಂದಿರುಗಿಸಬಹುದು. ಆದರೆ, ಸಾಲ ವಾಪಸಾತಿಯ ತಾತ್ಕಾಲಿಕ ತಡೆಯನ್ನು [moratorium] ನೀವು ಬಳಸಿಕೊಂಡು ಅಥವಾ ಬಳಸಿಕೊಳ್ಳದೆ, ಸಾಲದ ಉಳಿದ ಅವಧಿಯ ವಿಸ್ತರಣೆಯು ಎರಡು ವರ್ಷವನ್ನು ಮೀರುವಂತಿಲ್ಲ.
c. ಸಾಲ ವಾಪಸಾತಿಯ ಅವಧಿಯಲ್ಲಿ ನೀವು ಕಟ್ಟುವ ಒಟ್ಟು ಬಡ್ಡಿ ಹೆಚ್ಚುತ್ತದೆ.

KYONKI DIL AAPKI
NAHI SUNTA,
HUM AAPKI SUNTE HAIN.
#RishtaSam

### 5. ನಾನು ನನ್ನ ಇಎಮ್ಐ–ಗಳನ್ನು ಕಟ್ಟದಿದ್ದರೆ, ನನ್ನ ಸಾಲವನ್ನು ಆಟೊಮ್ಯಾಟಿಕ್ ಆಗಿ ಪುನರ್ರಚಿಸಲಾಗುವುದೇ?

ಇಲ್ಲ, ಈ ಸ್ಕೀಮಿಗೆ ನೀವು ಅರ್ಜಿ ಹಾಕದಿದ್ದರೆ ಅಥವಾ ನಿಮ್ಮ ಅರ್ಜಿಯು ತಿರಸ್ಕೃತವಾದರೆ, ನೀವು ನಿಮ್ಮ ಶೆಡ್ಯೂಲಿನ ಪ್ರಕಾರ ಇಎಮ್ಐ–ಗಳನ್ನು ಕಟ್ಟಬೇಕು ಎಂದು ನಿರೀಕ್ಷಿಸಲಾಗುತ್ತದೆ.ಹಾಗೆ ಮಾಡುವುದರಲ್ಲಿ ವಿಳಂಬವಾದರೆ ಅಥವಾ ಮಾಡದಿದ್ದರೆ, ಅದನ್ನು ವಿಳಂಬ/ಬೇಪಾವತಿ ಎಂದು ಪರಿಗಣಿಸಲಾಗುತ್ತದೆ ಮತ್ತು ಅದಕ್ಕೆ ದಂಡ/ಬೌನ್ಸ್ ಚಾರ್ಜುಗಳನ್ನು ವಿಧಿಸಲಾಗುತ್ತದೆ.

### 6. ಇದೀಗ ನನ್ನ ಆದಾಯದ ಮೇಲೆ ದುಷ್ಪರಿಣಾಮವಾಗಿಲ್ಲ , ಆದರೆ ಮುಂದೆ ಹಾಗಾಗಬಹುದು. ನಾನು ಸಾಲದ ಪುನರ್ರಚನೆಗೆ ಅರ್ಜಿ ಹಾಕಬಹುದೇ?

ನೀವು ಸಾಲದ ಪುನರ್ರಚನೆಗೆ ಅರ್ಜಿ ಹಾಕಬಹುದು. ಆದರೆ, ನಾವು ಮೇಲೆ ಹೇಳಲಾಗಿರುವ ಮಾನದಂಡಗಳು ಹಾಗೂ ಸಾಲ ವಾಪಸಾತಿಯ ಸಾಮರ್ಥ್ಯದಂತಹ ಇತರ ಅಂಶಗಳ ಆಧಾರದ ಮೇಲೆ ನಿಮ್ಮ ಅರ್ಜಿಯನ್ನು ಮೌಲ್ಯಾಂಕನ ಮಾಡುತ್ತೇವೆ; ನಂತರ ನಿಮ್ಮ ಸಾಲ ಪುನರ್ರಚನೆಯ ಕೋರಿಕೆಯು ಫುಲ್ಲರ್ಟನ್ ಇಂಡಿಯದ ಪಾಲಿಸಿಯ ಅವಶ್ಯಕತೆಯನ್ನು ಪೂರೈಸುತ್ತದೆಯೇ ಎಂಬುದನ್ನು ನಿಮಗೆ ತಿಳಿಸುತ್ತೇವೆ.

### 7. ಫುಲ್ಲರ್ಟನ್ ಇಂಡಿಯಾದ ಯಾವ ಪ್ರಾಡಕ್ಟ್‌ಗಳು ಸಾಲದ ಪುನರ್ರಚನೆಗೆ ಅರ್ಹವಾಗಿವೆ?

ಫುಲ್ಲರ್ಟನ್ ಇಂಡಿಯಾದ ಈ ಕೆಳಗಿನ ಪ್ರಾಡಕ್ಟ್‌ಗಳು ಈ ಸ್ಕೀಮಿಗೆ ಅರ್ಹವಾಗಿವೆ :

1. ಸೆಕ್ಯುರಿಟಿಗಳ ಮೇಲೆ ಸಾಲ
2. ಪ್ರಾಪರ್ಟಿಯ ಮೇಲೆ ಸಾಲ
3. ವೈಯಕ್ತಿಕ ಸಾಲಗಳು

4. ಟು ವೀಲರ್ ಸಾಲಗಳು
5. ಕಮರ್ಶಿಯಲ್ ವಾಹನಕ್ಕೆ ಸಾಲಗಳು
6. ಬಿಸಿನೆಸ್ ಸಾಲಗಳು
7. ಎಮ್‌ಎಸ್‌ಎಮ್‌ಇ ಸಾಲಗಳು/ಸೆಕ್ಯುರಿಟಿಯುಳ್ಳ ಬಿಸಿನೆಸ್ ಸಾಲಗಳು
8. ಮನೆ ಸಾಲಗಳು

*ಈ ಸ್ಕೀಮಿಗೆ ಆರ್‌ಬಿಐ ನೀಡಿರುವ ನಿಯಮಗಳ ಚೌಕಟ್ಟು ಮತ್ತು ಮಾರ್ಗಸೂಚಕಗಳ ಪ್ರಕಾರ ಪ್ರಾಡಕ್ಟ್‌ಗಳ ಪುನರ್ರಚನೆಯನ್ನು ಪರಿಗಣಿಸಲಾಗುತ್ತದೆ.

## 8. ಸಾಲದ ಪುನರ್ರಚನೆಯ ಸ್ಕೀಮಿಗೆ ಹೇಗೆ ಅರ್ಜಿ ಹಾಕಬೇಕು?

ಸಾಲದ ಪುನರ್ರಚನೆಯ ಸ್ಕೀಮಿಗೆ ಅರ್ಜಿ ಹಾಕುವುದಕ್ಕೆ, ದಯವಿಟ್ಟು ಕೆಳಗಿನ ಕ್ರಮಗಳನ್ನು ಅನುಸರಿಸಿರಿ :

1. ಪುಟದ ಮೇಲುತುದಿಯಲ್ಲಿರುವ "ನಮ್ಮನ್ನು ಸಂಪರ್ಕಿಸಿ" ಸೆಕ್ಷನ್ ಮೇಲೆ ಕ್ಲಿಕ್ ಮಾಡಿರಿ.

2. "ಚಾಲ್ತಿಯಲ್ಲಿರುವ ಗ್ರಾಹಕ " ಎಂಬುದನ್ನು ಆಯ್ಕೆ ಮಾಡಿ ಮತ್ತು ನಿಮ್ಮ ಎಲ್‌ಎಎನ್, ಐಡಿ, ಮೊಬೈಲ್ ನಂಬರ್‌ನಂತಹ ನಿಮ್ಮ ವಿವರಗಳನ್ನು ನಮೂದಿಸಿ.

3. "ವಿಚಾರಣೆ/ಕೋರಿಕೆ/ದೂರುಗಳ ಸ್ವರೂಪದ" ಡ್ರಾಪ್‌ಡೌನ್‌ನಿಂದ "ಒಂದು ಬಾರಿಯ ಸಾಲದ ಪುನರ್ರಚನೆ" ಎಂಬುದನ್ನು ಆಯ್ಕೆ ಮಾಡಿ.

4. ನಂತರ "ಹೆಚ್ಚಿನ ವಿವರಗಳು" ಡ್ರಾಪ್‌ಡೌನ್‌ನಿಂದ "ಒಂದು ಬಾರಿಯ ಸಾಲದ ಪುನರ್ರಚನೆ" ಎಂಬುದನ್ನು ಆಯ್ಕೆ ಮಾಡಿ.

5. ಅದರ ನಂತರ ನಿಮ್ಮ ಉದ್ಯೋಗದ ಸ್ವರೂಪ, ಕೋವಿಡ್ ಪಿಡುಗಿನ ಕಾರಣ ನೀವು ಎದುರಿಸಿದ [ಅಥವಾ ಎದುರಿಸುತ್ತಿರುವ] ಆರ್ಥಿಕ ದುಷ್ಪರಿಣಾಮದ ಮಟ್ಟ ಮತ್ತು ಇನ್ನೂ ಹೆಚ್ಚಿನ ಕೆಲವು ನಿರ್ದಿಷ್ಟ ಮಾಹಿತಿಯನ್ನು ನೀಡಲು ನಿಮ್ಮನ್ನು ಕೇಳಲಾಗುತ್ತದೆ.

6. ದಯವಿಟ್ಟು ಮೇಲಿನ ಮಾಹಿತಿಯನ್ನು ಆದಷ್ಟು ಎಚ್ಚರದಿಂದ ಮತ್ತು ನಿಖರವಾಗಿ ನಮೂದಿಸಿರಿ. ಇಲ್ಲಿ ನೀವು ಕೊಡುವ ಮಾಹಿತಿಯ ಆಧಾರದ ಮೇಲೆ ನಿಮ್ಮ ಕೋರಿಕೆಯನ್ನು ಮುಂದಿನ ಪ್ರಾಸೆಸಿಂಗ್‌ಗೆ ಮೌಲ್ಯಾಂಕನ ಮಾಡಲಾಗುತ್ತದೆ.

7. ನೀವು ಎಲ್ಲಾ ಅವಶ್ಯಕ ವಿವರಗಳನ್ನೂ ನೀಡಿ ಅವನ್ನು ಪುನಃ ಪರಿಶೀಲಿಸಿದ ನಂತರ "ಸಲ್ಲಿಸಿರಿ" ಮೇಲೆ ಕ್ಲಿಕ್ ಮಾಡಿ.

8. ಪಾಲಿಸಿಯ ಪ್ರಕಾರ ನಿಮ್ಮ ಅರ್ಜಿಯನ್ನು ಅರ್ಹ ಎಂದು ಪರಿಗಣಿಸಲಾದರೆ, ಮುಂದಿನ ಕ್ರಮಗಳ ಬಗ್ಗೆ ನಮ್ಮ ಪ್ರತಿನಿಧಿಯಿಂದ ನಿಮಗೆ ಫೋನ್ ಬರುತ್ತದೆ.

KYONKI DIL AAPKI
NAHI SUNTA,
HUM AAPKI SUNTE HAIN
#RishtaSammaanKa

ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ನೀವು ಸಲ್ಲಿಸಿ, ಫುಲ್ಲರ್‌ಟನ್ ಇಂಡಿಯ ಅವನ್ನು ಪರಿಶೀಲಿಸಿದ ನಂತರ, ನಿಮ್ಮ ಅಂತಿಮ ಅರ್ಹತೆಯನ್ನು ನಿರ್ಧರಿಸಲಾಗುತ್ತದೆ ಎಂಬುದನ್ನು ದಯವಿಟ್ಟು ಗಮನದಲ್ಲಿಟ್ಟುಕೊಳ್ಳಿರಿ.

## 9. ಸಾಲದ ಪುನರ್ರಚನೆಗೆ ಅಗತ್ಯವಿರುವ ದಾಖಲೆಗಳು ಯಾವುವು?

ಸಾಲದ ಪುನರ್ರಚನೆಗೆ ಅಗತ್ಯವಿರುವ ದಾಖಲೆಗಳ ಪಟ್ಟಿಯನ್ನು ಇಲ್ಲಿ ಕೊಡಲಾಗಿದೆ :

ಸಂಬಳದ ಸಾಲಗಾರರಿಗೆ :

1. ಕಳೆದ 6 ತಿಂಗಳಿನ ಸಂಬಳದ ಸ್ಲಿಪ್‌ಗಳು ಮತ್ತು ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು
2. ಸಹ-ಅರ್ಜಿದಾರರಿದ್ದಲ್ಲಿ, ಎಲ್ಲಾ ಪಾರ್ಟಿಗಳೂ ದಾಖಲೆಗಳನ್ನು ಸಲ್ಲಿಸಬೇಕು ಎಂದು ಕೇಳಿಕೊಳ್ಳಲಾಗುತ್ತದೆ.

3. ಕಳೆದ 6 ತಿಂಗಳಿನ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು

ಸ್ವಂತ-ಉದ್ಯೋಗದ ಸಾಲಗಾರರಿಗೆ/ಎಂಟಿಟಿಗಳಿಗೆ :

1. ಕಳೆದ 12 ತಿಂಗಳಿನ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು
2. ಜಿಎಸ್‌ಟಿ ರಿಟರ್ನ್ಸ್
3. ಆದಾಯ ತೆರಿಗೆಯ ರಿಟರ್ನ್ಸ್
4. ಉದ್ಯಮ್ ಸರ್ಟಿಫಿಕೇಟ್
5. ಅನೇಕ ಅರ್ಜಿದಾರರು/ಎಂಟಿಟಿಗಳು ಇದ್ದರೆ, ಎಲ್ಲಾ ಪಾರ್ಟಿಗಳೂ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ.

ಸೆಕ್ಯುರಿಟಿ [ಅಡವು] ಇರುವ ಸಾಲಗಳಿಗೆ, ಪುನರ್ರಚನೆಯ ಕಾಲದಲ್ಲಿ ಬಾಕಿಯಿರುವ ಸಾಲದ ಮೊತ್ತವನ್ನು ಅವಲಂಬಿಸಿ, ಏನಾದರೂ ಹೆಚ್ಚಿನ ಕೊಲ್ಯಾಟಿರಲ್ ಅಗತ್ಯವಿದೆಯೇ ಎಂಬುದನ್ನು ನಿರ್ಧರಿಸಲಾಗುತ್ತದೆ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೇಳಲಾಗುತ್ತದೆ.

ಈ ಪಟ್ಟಿಯು ಸೂಚನೆ ನೀಡುವ ಪಟ್ಟಿ ಮಾತ್ರ; ಹಲವಾರು ಇತರ ಅಂಶಗಳನ್ನು ಅವಲಂಬಿಸಿ, ಹೆಚ್ಚುವರಿ ದಾಖಲೆಗಳನ್ನೂ ಕೇಳಬಹುದು.

### 10. ನನ್ನ ಕ್ರೆಡಿಟ್ ಇತಿಹಾಸದ ಮೇಲೆ ಸಾಲ ಪುನರ್ರಚನೆಯಿಂದ ಏನು ಪರಿಣಾಮವಾಗುತ್ತದೆ?

ರೆಗ್ಯುಲೇಟರಿ ಮಾರ್ಗಸೂಚಕಗಳ ಪ್ರಕಾರ, ನಿಮಗೆ ನೀಡಿರುವ ಸಾಲದ / ಕ್ರೆಡಿಟ್‌ನ ಸೌಲಭ್ಯವನ್ನು "ಪುನರ್ರಚಿಸಲಾಗಿದೆ" ಎಂದು ಕ್ರೆಡಿಟ್ ಬ್ಯೂರೋಗೆ ವರದಿ ಮಾಡಲಾಗುತ್ತದೆ.

KYONKI DIL AAPKI
NAHI SUNTA,
HUM AAPKI SUNTE HAIN.
#RishtaSammaanKa

### 11. ನಾನು ಫುಲ್ಲರ್‌ಟನ್ ಇಂಡಿಯದಿಂದ ಅನೇಕ ಸಾಲಗಳನ್ನು ತೆಗೆದುಕೊಂಡಿದ್ದೇನೆ. ನಾನು ಸಾಲದ ಪುನರ್ರಚನೆಗೆ ಒಂದು ಬಾರಿ ಮಾತ್ರ ಅರ್ಜಿ ಹಾಕಬೇಕೇ ಅಥವಾ ಪ್ರತಿಯೊಂದು ಸಾಲಕ್ಕೂ ಪ್ರತ್ಯೇಕವಾಗಿ ಅರ್ಜಿ ಹಾಕಬೇಕೇ?

ನಿಮಗೆ ಅನೇಕ ಸಾಲಗಳಿದ್ದರೆ, ನೀವು ಪುನರ್ರಚನೆಯನ್ನು ಬಯಸುವ ಪ್ರತಿಯೊಂದು ಸಾಲಕ್ಕೂಪ್ರತ್ಯೇಕವಾಗಿ ಕೋರಿಕೆ ಸಲ್ಲಿಸಬೇಕು.

### 12. ನಾನು ಸ್ವಂತ-ಉದ್ಯೋಗಿ / ಸಣ್ಣ ಉದ್ಯಮ ಹೊಂದಿರುವ ಎಮ್‌ಎಸ್‌ಎಮ್‌ಇ ಎಂಟಿಟಿ. ನಾನು ಸಾಲದ ಪುನರ್ರಚನೆಗೆ ಅರ್ಹನೇ?

ಕೆಳಗಿನ ಟೇಬಲ್ ಭಾರತ ಸರ್ಕಾರವು ಮಾಡಿರುವ ತಿದ್ದುಪಡಿಗಳ ಪ್ರಕಾರ ಎಮ್‌ಎಸ್‌ಎಮ್‌ಇ ಎಂಟಿಟಿಗಳ ಹೊಸ ವಿವರಣೆಯನ್ನು ಕೊಡುತ್ತದೆ

| ವರ್ಗೀಕರಣ | ಒಟ್ಟು ಮಾನದಂಡಗಳು | ಮೈಕ್ರೋ | ಸಣ್ಣ | ಮಧ್ಯಮ |
|---|---|---|---|---|
| ಎಮ್‌ಎಸ್‌ಎಮ್‌ಇ - ಮೈಕ್ರೋ, ಸಣ್ಣ ಮತ್ತು ಮಧ್ಯಮ ಉದ್ಯಮಗಳು | ಪ್ಲಾಂಟ್‌ನಲ್ಲಿ ಮತ್ತು ಮಶೀನುಗಳಲ್ಲಿ ಅಥವಾ ಎಕ್ವಿಪ್‌ಮೆಂಟ್‌ನಲ್ಲಿನ ಹಣಹೂಡಿಕೆ ಈ ಮುಂದಿನದಕ್ಕಿಂತ ಹೆಚ್ಚು ಇರಬಾರದು : | ರೂ. 1 ಕೋಟಿ | ರೂ. 10 ಕೋಟಿ | ರೂ. 50 ಕೋಟಿ |
| | ವಾರ್ಷಿಕ ಟರ್ನ್‌ಓವರ್ ಈ ಮುಂದಿನದಕ್ಕಿಂತ ಹೆಚ್ಚು ಇರಬಾರದು : | ರೂ. 5 ಕೋಟಿ | ರೂ. 50 ಕೋಟಿ | ರೂ. 250 ಕೋಟಿ |

ಭಾರತ ಸರ್ಕಾರವು ಹೊರತಂದಿರುವ ಎಮ್‌ಎಸ್‌ಎಮ್‌ಇ ವರ್ಗೀಕರಣದ ಪರಿಷ್ಕೃತ ಮಾರ್ಗಸೂಚಕಗಳ ಪ್ರಕಾರ, ಎಮ್‌ಎಸ್‌ಎಮ್‌ಇ ವರ್ಗಕ್ಕೆ ಸೇರಿದ ಸ್ವಂತ-ಉದ್ಯೋಗದ ವ್ಯಕ್ತಿಗಳು / ಎಂಟಿಟಿಗಳು, ಬ್ಯಾಂಕುಗಳು ಮತ್ತು ಎನ್‌ಬಿಎಫ್‌ಸಿ-ಗಳ ನಾನ್-ಫಂಡ್ ಆಧಾರಿತ ಸೌಲಭ್ಯಗಳು ಒಳಗೊಂಡಂತೆ 01 ಮಾರ್ಚ್ 2020ರಂದು ಸಾಲದ ಒಟ್ಟು ಮೊತ್ತ ರೂ. 25 ಕೋಟಿಯನ್ನು ಮೀರಿರದಿದ್ದರೆ, ಎಮ್‌ಎಸ್‌ಎಮ್‌ಇ ಪುನರ್ರಚನೆಯ ಸ್ಕೀಮಿನ ಅಡಿಯಲ್ಲಿ ಪರಿಹಾರಕ್ಕೆ ಅರ್ಜಿ ಹಾಕಬಹುದು, ಹೆಚ್ಚಿನ ವಿವರಗಳಿಗೆ, ದಯವಿಟ್ಟು ನಿಮಗೆ ಸಮೀಪದಲ್ಲಿರುವ ಫುಲ್ಲರ್‌ಟನ್ ಇಂಡಿಯದ ಶಾಖೆಯನ್ನು ಅಥವಾ ನಿಮ್ಮ ರಿಲೇಶನ್‌ಶಿಪ್ ಮ್ಯಾನೇಜರ್‌ರನ್ನು ಸಂಪರ್ಕಿಸಿರಿ.

ನಮ್ಮ ಸ್ವಂತ-ಉದ್ಯೋಗದ ಗ್ರಾಹಕರು ದಯವಿಟ್ಟು ಆದಷ್ಟು ಬೇಗ ಸರ್ಕಾರದ ಉದ್ಯಮ್ ಪೋರ್ಟಲ್ ಮೂಲಕ ತಮ್ಮನ್ನು ಎಮ್‌ಎಸ್‌ಎಮ್‌ಇ ಎಂದು ರೆಜಿಸ್ಟರ್ ಮಾಡಿಕೊಳ್ಳಬೇಕು ಎಂದು ಫುಲ್ಲರ್‌ಟನ್ ಇಂಡಿಯ ಸಲಹೆ ಮಾಡುತ್ತದೆ.

## 13. ನಾನು ಮಾರ್ಚ್-ಆಗಸ್ಟ್ 2020ರ ನಡುವೆ ಸಾಲ ವಾಪಸಾತಿಯ ತಾತ್ಕಲಿಕ ತಡೆಯನ್ನು ಬಳಸಿಕೊಂಡಿರಲಿಲ್ಲ. ಈಗ ನಾನು ಸಾಲದ ಪುರ್ರಚನೆಗೆ ಅರ್ಜಿ ಹಾಕಬಹುದೇ?

**ನೀವು ಸಾಲದ ಪುನರ್ರಚನೆಗೆ ಅರ್ಜಿ ಹಾಕಬಹುದು. ಆದರೆ, ನಾವು ಮೇಲೆ ಹೇಳಲಾಗಿರುವ ಮಾನದಂಡಗಳು ಹಾಗೂ ಸಾಲ ವಾಪಸಾತಿಯ ಸಾಮರ್ಥ್ಯದಂತಹ ಇತರ ಅಂಶಗಳ ಆಧಾರದ ಮೇಲೆ ನಿಮ್ಮ ಅರ್ಜಿಯನ್ನು ಮೌಲ್ಯಾಂಕನ ಮಾಡುತ್ತೇವೆ; ನಂತರ ನಿಮ್ಮ ಸಾಲ ಪುನರ್ರಚನೆಯ ಕೋರಿಕೆಯ ಪ್ರಕ್ರಿಯೆಯನ್ನು ಮುಂದುವರಿಸಬಹುದೇ ಎಂಬುದನ್ನು ನಿಮಗೆ ತಿಳಿಸುತ್ತೇವೆ.**

## 14. ನಾನು ಸಹ-ಸಾಲಗಾರನೊಂದಿಗೆ/ರೊಂದಿಗೆ ಸಾಲ ತೆಗೆದುಕೊಂಡಿದ್ದೆ. ಸಾಲದ ಮೂಲ ಕರಾರಿನ ಎಲ್ಲಾ ಸಹ-ಸಾಲಗಾರರೂ ಸಾಲ ಪುನರ್ರಚನೆಯ ತಿದ್ದುಪಡಿ ಮಾಡಿರುವ ಕರಾರಿಗೆ ಸಹಿ ಮಾಡಬೇಕಾಗುತ್ತದೆಯೇ?

ರೆಗ್ಯುಲೇಟರಿ ಮತ್ತು ಕಾನೂನೀ ಅವಶ್ಯಕತೆಗಳ ಪ್ರಕಾರ, ಮೂಲ ಸಾಲದ ಎಲ್ಲಾ ಸಾಲಗಾರರು / ಸಹ-ಸಾಲಗಾರರು, ಪುನರ್ರಚನೆಯ ಕರಾರೂ ಸೇರಿದಂತೆ ಸಾಲದ ರಚನೆಯಲ್ಲಿ ಮಾಡಿರುವ ಯಾವುದೇ ಬದಲಾವಣೆಗಳಿಗೆ ಒಪ್ಪಿಕೊಂಡು ಸಹಿ ಮಾಡಬೇಕಾಗುತ್ತದೆ.

## 15. ಯಾವ ರೀತಿಯ ಸಾಲಗಳು ಪುನರ್ರಚನೆಗೆ ಅರ್ಹವಲ್ಲ?

ಈ ಕೆಳಗಿನ ರೀತಿಯ ಸಾಲಗಳು ಪುನರ್ರಚನೆಗೆ ಅರ್ಹವಲ್ಲ :

1. ಕೃಷಿ ಉದ್ದೇಶಗಳಿಗಾಗಿ ವ್ಯಕ್ತಿಗಳಿಗೆ/ಎಂಟಿಟಿಗಳಿಗೆ ಸಾಲ ಕೊಟ್ಟಿದ್ದು ಫುಲ್ಲರ್‌ಟನ್ ಇಂಡಿಯ ಕೃಷಿ ಸಾಲಗಳು ಎಂದು ವರ್ಗೀಕರಿಸಿರುವಂಥವು.
2. ಕೃಷಿಯ ಕ್ರೆಡಿಟ್ ಸೊಸೈಟಿಗಳು, ಫೈನ್ಯಾನ್ಸಿಯಲ್ ಸರ್ವೀಸ್ ಪ್ರವೈಡರ್‌ಗಳು, ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರೀ ಸಂಘಸಂಸ್ಥೆಗಳು, ಫುಲ್ಲರ್‌ಟನ್ ಇಂಡಿಯದ ನೌಕರರಿಗೆ ನೀಡಿರುವ ಸಾಲಗಳು
3. 01 ಮಾರ್ಚ್ 2020ರ ನಂತರ ಅಕೌಂಟನ್ನು ರೀಶೆಡ್ಯೂಲ್ ಮಾಡಲಾಗಿರುವ ಮನೆ ಸಾಲದ ಕಂಪನಿಗಳಿಗೆ ನೀಡಿರುವ ಸಾಲಗಳು
4. ಕಮರ್ಶಿಯಲ್ ಬಳಕೆಗೆ ನೀಡಲಾಗಿರುವ ಸಾಲಗಳಿಗೆ, ಮೇಲೆ ವಿವರಿಸಲಾಗಿರುವಂತೆ ಎಮ್‌ಎಸ್‌ಎಮ್‌ಇ ಗೈಡ್‌ಲೈನ್ಸ್ ಅಡಿಯಲ್ಲಿ ಪರಿಹಾರಕ್ಕೆ ಕ್ಲೈಮ್ ಮಾಡಲು ಅರ್ಹರಾಗಿರುತ್ತಾರೆ.

## 16. ಸಾಲದ ಪುನರ್ರಚನೆಯ ಸ್ಕೀಮಿಗೆ ಅರ್ಜಿ ಹಾಕಲು ಕೊನೆಯ ತಾರೀಖು ಯಾವುದು?

ನೀವು ಸಾಲದ ಪುನರ್ರಚನೆಗೆ ಅರ್ಜಿ ಹಾಕಲು ಇಷ್ಟಪಟ್ಟರೆ, ಆದಷ್ಟು ಬೇಗ ನೀವು ಅದನ್ನು ಮಾಡಬೇಕು ಎಂದು ಕೇಳಿಕೊಳ್ಳಲಾಗುತ್ತದ; ಯಾಕೆಂದರೆ ನಿಮ್ಮ ಅರ್ಹತೆಯು ಹೆಚ್ಚಾಗಿ ಕೋವಿಡ್-19 ಪಿಡುಗಿನ ನೇರ ಪರಿಣಾಮವಾಗಿ ನೀವು ಎದುರಿಸುತ್ತಿರಬಹುದಾದ ಆರ್ಥಿಕ ನಷ್ಟದ ಮಟ್ಟವನ್ನು ಅವಲಂಬಿಸಿರುತ್ತದೆ. ಫುಲ್ಲರ್‌ಟನ್ ಇಂಡಿಯ ಮೇಲೆ ಹೇಳಿರುವ

ಮಾನದಂಡಗಳ ಆಧಾರದ ಮೇಲೆ  ಮತ್ತು ಅರ್ಜಿಯ ಸಮಯದಲ್ಲಿ ಈ ಸ್ಕೀಮಿನ ಬಗ್ಗೆ ನಮ್ಮ ಪಾಲಿಸಿಯ ಆಧಾರದ ಮೇಲೆ, ನಿಮ್ಮ ಕೋರಿಕೆಯ ಮೌಲ್ಯಾಂಕನ ಮಾಡುತ್ತದೆ.

**17. ನಾನು ನನ್ನ ಸಾಲವನ್ನು ಪುನರ್ರಚಿಸಿಕೊಂಡರೆ, ಅದಕ್ಕೆ ಏನಾದರೂ ಫೀಸು ಅಥವಾ ಚಾರ್ಜುಗಳು ಇರುತ್ತವೆಯೇ?**

ನಿಮ್ಮ ಸಾಲವನ್ನು ನೀವು ಪುನರ್ರಚಿಸಿಕೊಳ್ಳುವ ಆಯ್ಕೆಯನ್ನು ಮಾಡಿದರೆ, ಫುಲ್ಲರ್‌ಟನ್ ಇಂಡಿಯ ಅದಕ್ಕೆ ಫೀಸನ್ನು ವಿಧಿಸಬಹುದು.

**18. ನಾನು ಸಾಲದ ಪುನರ್ರಚನೆಗೆ ಅರ್ಜಿ ಹಾಕಿದರೆ, ಆಗಲೂ ನಾನು ತಿಂಗಳ ಇಎಮ್‌ಐ ಕಟ್ಟಬೇಕಾಗುತ್ತದೆಯೇ?**

ನೀವು ಸಾಲದ ಪುನರ್ರಚನೆಯ ಅರ್ಜಿಯನ್ನು ಸಲ್ಲಿಸಿದರೂ, ಅದು ಸ್ವೀಕೃತವಾಗುವ ತನಕ ನೀವು ಈಗಿನ ಶೆಡ್ಯೂಲ್ ಪ್ರಕಾರವೇ ನಿಮ್ಮ ತಿಂಗಳ ಇಎಮ್‌ಐ ಕಟ್ಟಬೇಕು ಎಂದು ನಿರೀಕ್ಷಿಸಲಾಗುತ್ತದೆ. ನಿಮ್ಮ ಸಾಲದ ಪುನರ್ರಚನೆಯ ಕೋರಿಕೆಯನ್ನು ಸ್ವೀಕರಿಸಿದ ನಂತರ ನೀವು ಹೊಸ ಶೆಡ್ಯೂಲನ್ನು ಅನುಸರಿಸಬಹುದು.ಈಗಿನ ಸಾಲ ವಾಪಸಾತಿಯ ಶೆಡ್ಯೂಲ್ ಪ್ರಕಾರ ಸಮಯಕ್ಕೆ ಸರಿಯಾಗಿ ಇಎಮ್‌ಐ-ಗಳನ್ನು ಕಟ್ಟಬೇಕು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿರಿ; ಯಾಕೆಂದರೆ ಈ ಚೌಕಟ್ಟಿನ ಅಡಿಯಲ್ಲಿ ಆರ್‌ಬಿಐ ತೀರ್ಮಾನವನ್ನು ಚಾಲ್ತಿಗೆ ತರುವ ತನಕ ಅಕೌಂಟ್‌ಗಳನ್ನು ಸ್ಟ್ಯಾಂಡರ್ಡ್ ಎಂದು ವರ್ಗೀಕರಿಸಲಾಗುತ್ತದೆ.

ನಿಮ್ಮ ಸಾಲ ಪುನರ್ರಚನೆಯ ಅರ್ಜಿಯು ತಿರಸ್ಕೃತವಾದರೆ, ನೀವು ನಿಮ್ಮ ಚಾಲ್ತಿಯ ಶೆಡ್ಯೂಲಿನ ಪ್ರಕಾರ ಇಎಮ್‌ಐ–ಗಳನ್ನು ಕಟ್ಟಬೇಕು ಎಂದು ನಿರೀಕ್ಷಿಸಲಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿರಿ. ಇಎಮ್‌ಐ ಕಟ್ಟುವಲ್ಲಿ ವಿಳಂಬವಾದರೆ / ಕಟ್ಟದಿದ್ದರೆ, ಅದಕ್ಕೆ ಹೆಚ್ಚುವರಿ ಬಡ್ಡಿ ತಗಲುತ್ತದೆ ಮತ್ತು ಅದು ನಿಮ್ಮ ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಮಾಡುತ್ತದೆ.

**19. ನಾನು ಈಗ ಇಎಮ್‌ಐ–ಗಳನ್ನು ಕಟ್ಟಿ ಪುನರ್ರಚನೆಯನ್ನು ಆಯ್ದುಕೊಳ್ಳದಿದ್ದರೆ ಏನಾಗುತ್ತದೆ? ಈ ಸೌಲಭ್ಯವನ್ನು ನಾನು ಮುಂದೆ ಪಡೆದುಕೊಳ್ಳಬಹುದೇ?**

ನಿಮಗೆ ಈಗ ಇಎಮ್‌ಐ–ಗಳನ್ನು ಕಟ್ಟುವುದು ಸಾಧ್ಯವಾದರೆ, ಫುಲ್ಲರ್‌ಟನ್ ಇಂಡಿಯ ಅದನ್ನು ಸ್ವಾಗತಿಸುತ್ತದೆ. ಆದರೆ, ಈ ಸ್ಕೀಮಿನ ಅಡಿಯಲ್ಲಿನ ಪರಿಹಾರವನ್ನು ಒಂದು ನಿರ್ದಿಷ್ಟ ತಾರೀಖಿನೊಳಗೆ ಕೊಡಬೇಕಾಗುತ್ತದೆ ಮತ್ತು ನಿಮ್ಮ ಅರ್ಜಿಯನ್ನು ಆ ತಾರೀಖಿನ ಮುಂಚೆ ಸಲ್ಲಿಸಬೇಕಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿರಿ. ಅರ್ಜಿಯು ಮೇಲೆ ಹೇಳಿರುವ ನಿಯಮಗಳನ್ನು ಪೂರೈಸಿದರೆ ಮಾತ್ರ ಸ್ವೀಕರಿಸಲಾಗುತ್ತದೆ.ನಿಮ್ಮ ಅರ್ಜಿ ಮತ್ತು ಅದಕ್ಕೆ ನೆರವಾಗುವ ದಾಖಲೆಗಳು ಎಲ್ಲಾ ಸತ್ಯಾಸತ್ಯತೆಯ ಪರಿಶೀಲನೆಗಳನ್ನೂ ಪೂರ್ಣಗೊಳಿಸಬೇಕಾಗುತ್ತದೆ.

KYONKI DIL AAPKI
NAHI SUNTA,
HUM AAPKI SUNTE HAIN
#RishtaSammaanKa

*ನಿಯಮಗಳುಹಾಗೂಶರತ್ತುಗಳುಅನ್ವಯಿಸುತ್ತವೆ

**ಫೋರ್ಕ್ಲೋಸ್ ಶರ್ಚಾರ್ಜುಗಳಿಗೆಒಳಪಟ್ಟಿರುತ್ತದೆ.ನಿಯಮಗಳುಹಾಗೂಶರತ್ತುಗಳುಅನ್ವಯಿಸುತ್ತವೆ.